# ಕೊಂಧ ಸಂಚಯ

ಸಂಪಾದಕರು
ಪ್ರೊ. ಸುಮಾ ವ. ಸಾವಂತ



Scanned with CamScanner



ಚಿನ್ಮಯಿ

[illegible]

ಪ್ರಕಾಶನ

ISB No. : 978-81-950758-9-8

ಪ್ರಕಾಶನ
ಮಾತೋಶ್ರೀ ಈರಮ್ಮ ವಡ್ಡನಕೇರಿ ಪ್ರತಿಷ್ಠಾನ (ರಿ)
ಡೊಂಗರಗಾಂವ ತಾ. : ಕಮಲಾಪುರ ಜಿ. : ಕಲಬುರಗಿ

# ಪರಿವಿಡಿ


೧. ವೈದೇಹಿ ಕತೆಗಳಲ್ಲಿ ಕರಾವಳಿ ಕುಂದಾಪುರ ಜಗತ್ತು
– ಅಂಪಾರು ನಿತ್ಯಾನಂದ ಶೆಟ್ಟಿ ... ೧

೨. ಡಾ. ಅನುಪಮಾ ನಿರಂಜನವರ ಮಾಧವಿ ಕಾದಂಬರಿಯಲ್ಲಿ ಹೆಣ್ಣಿನ ಚಿತ್ರಣ
– ಪ್ರೊ. ಸುಮಾ ವ ಸಾವಂತ ... ೯

೩. ಭ್ರಮೆ ಮತ್ತು ಸತ್ಯದ ಹುಡುಕಾಟದಲ್ಲಿ ಸಂಶೋಧನೆಯ ಸತ್ಯದ ದಾರಿ
– ಡಾ. ವೈ. ಚಂದ್ರಬಾಬು ಮುಳಬಾಗಿಲು ... ೧೩

೪. ರಾಕ್ಷಸ ತಂಗಡಿ : ಹತ್ತಿಕ್ಕಲಾರದ ವೈರ್ಯಕ್ಕೆ ತಲೆದಂಡ
– ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ ... ೨೫

೫. ಕುವೆಂಪು ಅವರ ಕಥೆಗಳಲ್ಲಿ ಕೌಟುಂಬಿಕ ನೆಲೆಗಳು
– ಡಾ. ಶಂಕರೇಗೌಡ. ಎಸ್. ಎಸ್. ... ೪೬

೬. ಬದುಕಿನ ಸಿಹಿ-ಉಪ್ಪು-ಹುಳಿ-ಖಾರದ ಪ್ರತಿಬಿಂಬದ ಆತ್ಮಕಥೆ "ಹುಳಿಮಾವಿನ ಮರ"
– ಡಾ|| ಶಿವಕುಮಾರ್ ಎಂ. ಕೆ. ... ೫೩

೭. ರಾಯಚೂರು ಜಿಲ್ಲೆಯ ಕನ್ನಡ ಭಾಷೆಯ ಸ್ವರೂಪ
– ಡಾ. ಹುಸೇನಪ್ಪ ಅಮರಾಪುರ ... ೬೧

೮. ಶರಣ ಸಾಹಿತ್ಯದಲ್ಲಿ ಸಾಮಾಜಿಕ ಕಳಕಳಿ
– ಶ್ರೀ ಮಂಜುನಾಥ ಹಿರೇಮಠ ... ೬೫

೯. ಹೆಚ್. ಎಲ್. ಪುಷ್ಪಅವರ ಸಾಹಿತ್ಯದಲ್ಲಿ ಮಹಿಳೆ ಮತ್ತು ಬಂಡಾಯ
– ಆಶಿಕಾ ಹೆಚ್. ಸಿ. ... ೭೩

೧೦. ಕನ್ನಡ ಸಾಹಿತ್ಯಕ್ಕೆ ಪಾಶ್ಚಾತ್ಯರ ಕೊಡುಗೆ
– ಪ್ರೊ. ಶಕುಂತಲಾ ಪ್ರ. ಬರಗಿ ... ೮೧

೧೧. ಮಾಡರ್ನ್ ಮಹಿಳಾ ಸಂವೇದನೆ.....!
– ಪ್ರೊ. ಎಂ. ಡಿ. ಚಿತ್ತರಗಿ ... ೮೫

೧೨. ಕನ್ನಡ ಸಂಸ್ಕೃತಿ ಹಾಗೂ ಸ್ತ್ರೀವಾದಿ ಚಿಂತನೆಯ ತಾತ್ತ್ವಿಕ ನೆಲೆಗಳು
– ಸುಚಿತ್ರ ... ೯೨

೧೩. ನಾಟಕ ಸಾಹಿತ್ಯ
– ಶ್ರೀ ಮಂಜುನಾಥ ಪೂಜೇರಿ ... ೯೯

೧೪. ಕನ್ನಡ ಸಿನಿಮಾಲೋಕದ ಸುತ್ತ ಒಂದು ಅವಲೋಕನ
– ಮಂಜುನಾಥ ಈ. ... ೧೦೩

೧೫. ಸಾಹಿತ್ಯ ಮತ್ತು ಸೃಜನಶೀಲತೆ
– ಎಂ. ಮನೋಜ್ ... ೧೦೯




Scanned with CamScanner

೧೬. ಮೈಲಾರ ಸಂಸ್ಕೃತಿ
- ಇಂದ್ರವ್ವ ಎಸ್. ಬುದ್ನಾಳವರ ... ೧೧೬

೧೭. ಮಲಹರ ಕಾಯಕದ ಚಿಕ್ಕದೇವಯ್ಯ
- ಶ್ರೀಮತಿ ಕಾಳೂಬಾಯಿ ನರಗುಂದ ... ೧೨೫

೧೮. ಪಣಿಯನ್ ಬುಡಕಟ್ಟು
- ದಿವ್ಯ ಎಸ್. ಆರ್. ... ೧೩೦

೧೯. ಕೊರಗ ಆದಿಮ ಬುಡಕಟ್ಟು
- ಕಲಾವತಿ ... ೧೩೩

೨೦. ಸ್ತ್ರೀವಾದ
- ಸೋನಾಬಾಯಿ ಪ. ನಾಯಕ್ ... ೧೩೭

೨೧. ನವ್ಯ ಸಾಹಿತ್ಯದಲ್ಲಿ "ವ್ಯಕ್ತಿ" ಪರಿಕಲ್ಪನೆಯ ತಾತ್ವಿಕ ಸ್ವರೂಪ
- ಡಾ. ಬಸವರಾಜು ಬಿ. ಕೆ. ... ೧೪೦

೨೨. 'ನಾಟಕ ಸಾಹಿತ್ಯ'
- ಲಲಿತಾ ... ೧೪೬

೨೩. "ಹೊಸಗನ್ನಡ ಕಾವ್ಯದಲ್ಲಿ ಸ್ತ್ರೀ ವೈಚಾರಿಕ ಪ್ರಜ್ಞೆ"
- ಡಾ. ಕಸ್ತೂರಿ ಬಿ. ದಳವಾಯಿ ... ೧೫೧

೨೪. ಕನ್ನಡ ಪ್ರಾಚೀನ ಸಾಹಿತ್ಯಕ್ಕೆ ಶಾಸನಗಳ ಕೈಗನ್ನಡಿ
- ಲೋಹಿತ್ ಪಿ. ... ೧೫೭

೨೫. ಮಹಿಳಾ ಆತ್ಮ ಕಥನಗಳಲ್ಲಿ ಸ್ತ್ರೀ ಸಂಘರ್ಷ
- ಶ್ರೀಮತಿ ನಾಗರತ್ನಾ ಸೂರ್ಯವಂಶಿ ... ೧೬೪

***



Scanned with CamScanner

# ಮಹಿಳಾ ಆತ್ಮ ಕಥನಗಳಲ್ಲಿ ಸ್ತ್ರೀ ಸಂಘರ್ಷ

- ಶ್ರೀಮತಿ ನಾಗರತ್ನಾ ಸೊಯ್ಗವಂಬಿ
ಅತಿಥಿ ಉಪನ್ಯಾಸಕಿ,
ಜನತಾ ಕಲಾ, ವಿಜ್ಞಾನ ಹಾಗೂ ವಾಣಿಜ್ಯ
ಜನತಾ ಮಹಾವಿದ್ಯಾಲಯ, ಹುಬ್ಬಳ್ಳಿ

ಕನ್ನಡ ಸಾಹಿತ್ಯವು ಸದಾ ಕಾಲ ಹರಿಯುವ ನದಿಯಂತೆ ತನ್ನ ತೋಳತೆಕ್ಕೆಯಲ್ಲಿ ಬಂದು ಸೇರುವ ಅನೇಕ ಹಳ್ಳ, ಕೊಳ್ಳ, ಝರಿಗಳಂತೆ ನಾನಾ ಪ್ರಕಾರವಾಗಿ ಕಾದಂಬರಿ, ಕಥೆ, ಕವನ, ಪ್ರವಾಸ ಕಥನ, ವ್ಯಕ್ತಿಚಿತ್ರ, ಸಂಶೋಧನೆ, ಪ್ರಬಂಧ ಹೀಗೆ ಹಲವಾರು ಪ್ರಕಾರಗಳು ಸೇರಿ ಕನ್ನಡ ಸಾಹಿತ್ಯದ ನದಿಯು ಮೈದುಂಬಿ ಸದಾ ಭೋರ್ಗರೆಯುತ್ತ ವಿಶಾಲಸಾಗರವಾಗಿ ಸ್ಥಾಪಿತವಾಗಿದೆ.

ಇತ್ತೀಚಿನ ದಿನಗಳಲ್ಲಿ ಮಹಿಳಾ ಸಾಹಿತ್ಯವು ಸಹ ತನ್ನ ಅಸ್ತಿತ್ವವನ್ನು ಕಂಡುಕೊಂಡಿದ್ದು, ಎಲ್ಲ ಪ್ರಕಾರಗಳ ಕೃತಿಯೊಂದಿಗೆ ಆತ್ಮ ಕಥನ ಎಂಬ ಪ್ರಕಾರದಲ್ಲಿ ರಚನೆಯಾಗುತ್ತಿರುವುದನ್ನು ಕಾಣಬಹುದು. ಹೀಗೆ ಆತ್ಮಕಥನ ಎಂಬುದು ಸ್ವತಃ ತಾನೇ ತನ್ನ ಜೀವನದ ಕುರಿತು ಪ್ರಾಮಾಣಿಕವಾಗಿ ಬರೆಯುವುದೇ ಆತ್ಮಕಥನ ಎಂದೆನಿಸಿಕೊಳ್ಳುತ್ತದೆ.

ಜಗತ್ತನ್ನೆ ಸಾಕಿ, ಸಲುಹಿ, ಬೆಳೆಸಿದಂತ ಸ್ತ್ರೀಗೆ ತನ್ನ ಬದುಕಿನಲ್ಲಿ ಬರುವ ಅನೇಕ ಪಾತ್ರಗಳಿಗೆ ಸ್ಫೂರ್ತಿಯನ್ನು ತುಂಬುತ್ತಾ ಬಂದಿರುವ ಅವಳು ತನ್ನ ಜೀವನದಲ್ಲಿ ತನಗಾಗಿ ಅಲ್ಲದೆ ಇತರರಿಗಾಗಿ ಹೆಚ್ಚು ಶ್ರಮಿಸುತ್ತಲೇ ಬಂದಿರುವ ನಾರಿ ತನ್ನ ಅಂತರಾಳದ ತಾಕಲಾಟಗಳನ್ನು, ಹಾಗೂ ನೋವು-ನಲಿವುಗಳನ್ನು, ಅನಿಸಿಕೆಗಳನ್ನು ಹೇಳಿಕೊಳ್ಳಲು ಬರವಣಿಗೆಯ ಮೂಲಕ ಕಾದಂಬರಿ, ಕಥೆ, ಕಾವ್ಯ ಹೀಗೆ ಹೊರ ಹಾಕಿದರು ಕೂಡ ಅವಳ ಅಂತರಾಳದಲ್ಲಿ ಹುದುಗಿರುವ ತನ್ನ ಸಂಪೂರ್ಣ ಅನುಭವಗಳು ಅಷ್ಟೊಂದು ವ್ಯಕ್ತವಾಗಿರಲಿಲ್ಲವೆಂದೇ ಹೇಳಬಹುದು. ಏಕೆಂದರೆ ಪುರುಷ ಕೇಂದ್ರಿತ ಸಮಾಜ ಅವಳ ಸುತ್ತಲು ಕೋಟೆಯನ್ನು ಕಟ್ಟಿದ್ದರಿಂದ, ಅದನ್ನು ದಾಟಿ ಹೊರ ಬರುವ ಒಂದು ಮಾರ್ಗವೇ ಸಾಹಿತ್ಯ ರಚನೆಯ 'ಆತ್ಮ ಕಥನಗಳು' ಈ ಆತ್ಮ ಕಥನಗಳಲ್ಲಿ ನಾರಿಯ ವಿಶಿಷ್ಟ ಜೀವನ ಸ್ವರೂಪ ಮತ್ತು ಮನೋವೈಜ್ಞಾನಿಕ ಸ್ವಭಾವಗಳೊಂದಿಗೆ ಲೇಖಕಿಯರಾಗಿ ತಮ್ಮ ಹೋರಾಟ ಯಾವ ಬಗೆಯದು ತಮ್ಮ ಸೃಜನಶೀಲತೆಯ ತೊಡಕುಗಳಿಂದ, ಸಂಘರ್ಷಗಳಿಂದ ಆಗುವ



ಅನುಸಂಧಾನಗಳೇನು? ಬರಹಗಾರ್ತಿಯರಾಗಿ ಕೌಟುಂಬಿಕ, ಸಾಮಾಜಿಕ, ರಾಜಕೀಯ ಪರಿಸರದೊಂದಿಗೆ ತಮ್ಮ ವಿಕಸನದ ಹಿನ್ನಡೆಗಳು ಯಾವ ಬಗೆಯವು? ಈಗಿನ ಪರಿಸರದಲ್ಲಿ ತಮಗೂ ಸಮಾಜಕ್ಕೂ ಎದುರಾಗುತ್ತಿರುವ ಆತಂಕ, ಅನುಕೂಲಗಳನ್ನು ಲೇಖಕಿಯರು ಹೇಗೆ ಗುರುತಿಸುತ್ತಾರೆ? ಈ ವಿಶಿಷ್ಟ ಚಾರಿತ್ರಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಸಾಹಿತ್ಯದ ಸೃಜನಶೀಲತೆ ಒದಗಿಸುವ ದಾರಿ ಯಾವುದು? ಆ ಪ್ರಕ್ರಿಯೆ ಸೂಕ್ಷ್ಮವಿವರಗಳು ಯಾವ ರೀತಿಯಾದವು? ಸೃಜನಶೀಲತೆಯ ಅಭಿವ್ಯಕ್ತಿಗೆ ಬೇಕಾದ ವ್ಯುತ್ಪತ್ತಿಗಳಿಗೆ ತೊಡಕುಗಳು ಎಲ್ಲಿವೆ? ಮತ್ತು ಯಾಕಿವೆ? ನಾರಿಯ ಅನುಭವ ಮತ್ತು ಭಾಷೆಯ ನೆಲೆಯಲ್ಲಿ ಸ್ತ್ರೀತ್ವ ಮತ್ತು ಸಂವೇದನೆಯ ಪಾತ್ರಗಳೇನು? ಇಂಥ ಎಲ್ಲ ಪ್ರಶ್ನೆಗಳೂ ಅವರನ್ನು ಕಾಡುತ್ತಲೇ ಇದ್ದವು.

ನಾರಿಯು ಹುಟ್ಟಿನಿಂದ ಹಿಡಿದು ಸಾಯುವರೆಗೆ ಅನೇಕ ಸಂಘರ್ಷಗಳು ಬದುಕಿನುದ್ದಕ್ಕೂ ಎದುರಿಸುತ್ತಲೇ ಬಂದಿದ್ದಾಳೆ. ಧಾರ್ಮಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹೀಗೆ ಹಲವಾರು ರೀತಿಯಲ್ಲಿ ತನ್ನ ಜೀವನದ ಬಹುಭಾಗ ನಾರಿ ಸಂಘರ್ಷಗಳಲ್ಲಿ ಹೇಗೆ ಕಳೆದಿದ್ದಾಳೆ ಎನ್ನಬಹುದು. ನಾರಿಯ ಬರವಣಿಗೆಯು ಆತ್ಮ ಕಥನಗಳ ಮೂಲಕ ಜೀವಮಾನದುದ್ದಕ್ಕೂ ನಡೆದ ಹಲವಾರು ಸ್ತ್ರೀ ಘಟನೆಗಳಿಗೆ ಈ ಆತ್ಮ ಕಥನಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಹೊಸ ಸಾಹಿತ್ಯ ಪ್ರಕಾರದೊಂದಿಗೆ ಇತ್ತೀಚೆಗೆ ಪ್ರಚಲಿತವಾಗಿದ್ದರೂ ಇದರ ಕುರಿತು ವಿವೇಚಿಸುವಾಗ ೧೨ನೇ ಶತಮಾನದಲ್ಲಿ ಬರುವ ವಚನಗಾರ್ತಿಯರ

ವಚನಗಳಿಂದ ಅಂದಿನ ಜೀವನ ಸಂಘರ್ಷಗಳನ್ನು ವ್ಯಕ್ತ ಪಡಿಸಲಾಗುತ್ತದೆ. ಅದರಲ್ಲೂ ಸ್ತ್ರೀ ಸಮಾನತೆಯನ್ನು ಕಂಡುಕೊಂಡ ಮಹಿಳೆ ಅಕ್ಕಮಹಾದೇವಿಯ ಒಂದೊಂದು ವಚನವು ಆತ್ಮ ನಿವೇದನೆ ಮೂಲಕ ಆತ್ಮ ಕಥನದಂತೆ ಮೂಡಿ ಬಂದಿವೆ ಎನ್ನಬಹುದು.

ಅಕ್ಕನ ವಚನಗಳ ಅಂತರಾಳವನ್ನು ಒಳಹೊಕ್ಕಾಗ ಅವಳ ಅಭಿವ್ಯಕ್ತಿಯಲ್ಲಿನ ವಿನಯ ನಮ್ರತೆ, ಪ್ರಾಮಾಣಿಕತೆ ಜೊತೆಗೆ ತೋರಿದ ಕಾಯಕ ನಿಷ್ಠೆ, ನಿರ್ಭಿಡೆ ಅಭಿವ್ಯಕ್ತಿಯೊಂದಿಗೆ ಸಾಮಾಜಿಕ ಕಳಕಳಿಯು ಎದ್ದು ಕಾಣುತ್ತದೆ. ಲಿಂಗ ತಾರತಮ್ಯ, ಜಾತಿಭೇದದಂತಹ ವಿಚಾರ ಅಂದು-ಇಂದು-ಎಂದಿಗೂ ಇತ್ತೆಂದು ದೃಢೀಕರಿಸುತ್ತದೆ. ತನ್ನ ಬದುಕನ್ನು ತನ್ನಿಷ್ಟದಂತೆ ಹಾಗೂ ನಿರ್ಭಯ ಆಯ್ದುಕೊಂಡು ತನ್ನ ಅಂತರಂಗದ ನಲ್ಲನಾದ ಚೆನ್ನಮಲ್ಲಿಕಾರ್ಜುನನನ್ನು ಗಂಡನೆಂದು ಅಪ್ಪಿಕೊಂಡು ಈ ಲೌಕಿಕ ಬದುಕಿನ ಸುಖಗಳನ್ನು ಧಿಕ್ಕರಿಸಿ, ಅಲೌಕಿಕ ಸುಖವನ್ನು ಅರಸಿ ನಡೆದ ಅಕ್ಕನ ಬದುಕು ಅತ್ಯಂತ ಪ್ರಾಮಾಣಿಕ ಹಾಗೂ ಪಾರದರ್ಶಕವಾಗಿದೆ. ಆಕೆಯ ನಿಲುವುಗಳು, ಅಧ್ಯಾತ್ಮದ ಒಲವು, ಕಾವ್ಯದ ಪದಗಳು, ಪ್ರತಿಮೆಗಳು ಜೀವನದ ಅನುಭವಗಳನ್ನು ಮೇಳೈಸಿ ಒಂದೊಂದು ವಚನಗಳು ಅವಳ ಆತ್ಮ ಕಥೆಯ ಒಂದೊಂದು ಅಧ್ಯಾಯವಾಗಿ ಕಂಡು ಬರುತ್ತದೆ.



Scanned with CamScanner

ಆತ್ಮ ಭಾಷೆಯು ಅಂತರಮುಖಿ ಮತ್ತು ಬಾಹ್ಯ ಜೀವನದ ಶಕ್ತಿ ಪ್ರಜ್ಞೆಯನ್ನು ಮೂಲವಾಗಿಟ್ಟುಕೊಂಡು ಆತ್ಮ ಕಥೆಗಳನ್ನು ನಿರೂಪಿಸುವ ನಾರಿಮಣಿಯರು ನಮ್ಮಲ್ಲಿ ಹೆಚ್ಚುತ್ತಿದ್ದಾರೆ. ಹಾಗೆ ನೋಡಿದರೆ ಮರಾಠಿ, ಬೆಂಗಾಲಿ ಹಾಗೂ ಇತರ ಭಾಷೆಗಳಲ್ಲಿ ರಚನೆಗೊಂಡಷ್ಟು ಕನ್ನಡದಲ್ಲಿ ಅಷ್ಟೊಂದು ರಚನೆಗೊಂಡಿಲ್ಲವೆಂದೇ ಹೇಳಬಹುದು. ಆದರೆ ಎಪ್ಪತ್ತು ಮತ್ತು ಎಂಬತ್ತರ ದಶಕಗಳಲ್ಲಿ ಮಹಿಳಾ ಸಾಹಿತ್ಯದಲ್ಲಿ ಅನೇಕ ಬದಲಾವಣೆಗಳು ಕಂಡು ಬರುವುದರ ಜೊತೆಗೆ ತನ್ನ ವಸ್ತು ಗಾಂಭೀರ್ಯವನ್ನು ಹೆಚ್ಚಿಸುವ ಕೃತಿಗಳು ನಿರ್ಮಾಣಗೊಂಡಿವೆ. ಮಹಿಳಾ ಆತ್ಮಕಥೆ ರೂಪಕವಾಗಿ ಪ್ರತ್ಯೇಕ ಮಹಿಳಾ ಆತ್ಮಕಥೆಗಳು ಎಂದು ಕರೆಯಬಹುದಾದ ಅನೇಕ ಕೃತಿಗಳು ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಸ್ಥಾನವ ಪಡೆದಿದೆ ಎನ್ನಬಹುದು.

ನಾರಿಯರ ಆತ್ಮಕಥೆಗಳಲ್ಲಿ ಪುರುಷರಿಗಿಂತ ಹೆಚ್ಚು ಕಾಡುವ ಲೈಂಗಿಕತೆ, ಸ್ವಾಭಾವಿಕ ಪಾರದರ್ಶಕತೆಗಳನ್ನು ಸ್ವೀಕರಿಸಿ ಮುಕ್ತವಾಗಿ ಬರೆಯುವ ಪರಿಪಾಠವನ್ನು ನಾರಿಯ ಆತ್ಮಕಥೆಗಳ ನಿರೂಪಣೆಯಲ್ಲಿ ಸೋತಿಲ್ಲವೆಂದೇ ಹೇಳಬಹುದು. ಆಧುನಿಕೋತ್ತರದ ಸಾಹಿತ್ಯದ ಸಂದರ್ಭದಲ್ಲಿ ಮಹಿಳಾ ಆತ್ಮಕಥೆಗಳನ್ನು ಗಮನಿಸುವುದಾದರೆ ಅನುಪಮಾ ನಿರಂಜನರವರ ನೆನಪು ಸಿಹಿ–ಕಹಿ, ವಸಂತಿಬಾಯಿ ಪಡುಕೋಣೆಯವರ 'ನನ್ನ ಮಗ ಗುರುದತ್ತ', ಶಾರದಾ ಹಮ್ಮಿಗೆರವರ ಬದುಕು ಕೊಟ್ಟಿದ್ದು ಕಲಿಸಿದ್ದು, ಸಾರಾ ಅಬೂಬಕ್ಕರವರ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು', ಶಶಿಕಲಾ ವೀರಯ್ಯಸ್ವಾಮಿಯವರ 'ಬದ್ದೇನಯ್ಯ ಇಲ್ಲದಂತೆ', ಭಾರ್ಗವಿ ನಾರಾಯಣರವರ 'ನಾನು ಭಾರ್ಗವಿ' ಹಾಗೂ ಕನ್ನಡ ಲೇಖಕಿಯರ ಸಂಘ ಹೊರ ತಂದಿರುವ 'ಲೇಖಿ ಲೋಕ' ಪುಸ್ತಕಗಳ ಮೂಲಕ ಬಂದಿರುವ ಅನೇಕ ಲೇಖಕಿಯರ ಆತ್ಮಕಥಾನಕಗಳಲ್ಲಿ ಹಲವಾರು ಸಾಧಕಿಯರು ತಮ್ಮ ಬದುಕನ್ನು ಆತ್ಮಕಥೆಯ ಮಾಧ್ಯಮದಿಂದ ನಿರೂಪಿಸಲು ಹೊರಟಿದ್ದಾರೆ. ಈ ದಿಶೆಯಲ್ಲಿ ಮಹಿಳೆಯರ ಆತ್ಮಕಥಾನಕಗಳನ್ನು ಧಾರ್ಮಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಈ ಲೇಖನದ ಮೂಲಕ ಚರ್ಚಿಸಲಾಗಿದೆ.

**ಧಾರ್ಮಿಕವಾಗಿ :**

ನಾರಿಯು ಪುರುಷ ಕೇಂದ್ರಿತವಾದ ವ್ಯವಸ್ಥೆಯಲ್ಲಿ ಬದುಕುತ್ತಿರುವುದರಿಂದ ಆಕೆಯ ಸುತ್ತಲು ನೀತಿ, ನಿಯಮ, ಸಂಪ್ರದಾಯ ಪದ್ಧತಿಯಂತಹ ಕಟ್ಟಳೆಯನ್ನು ನಿರ್ಮಿಸಿ, ಆ ಕಟ್ಟಳೆಯಲ್ಲಿ ಅವಳನ್ನು ಬದುಕುವಂತೆ ಮಾಡುತ್ತಿದ್ದರು. ಆಕೆಗೆ ಹೊರ ಜಗತ್ತಿನ ಪರಿಚಯ ಮಾಡಿಕೊಡದೆ ಒತ್ತಾಯ ಪೂರಕವಾಗಿ ಅವಳ ಮೇಲೆ ನಿರ್ಬಂಧನೆಗಳನ್ನು ಹೇರುತ್ತಿದ್ದರು.

ಮೊದಲಿಗೆ 'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದ್ದಂತೆ' ಆಡುವ ಜನ ಆ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆ ಸ್ವಾತಂತ್ರ್ಯ, ವಿದ್ಯಾಭ್ಯಾಸ, ಯಾವುದನ್ನು ಸಮ ಪ್ರಮಾಣದಲ್ಲಿ ನೀಡುತ್ತಿರಲಿಲ್ಲ. ಅಲ್ಲದೇ ಹೆಣ್ಣು ಮಕ್ಕಳು ಮನೆಗೆಲಸ, ಕುಟುಂಬದ ಪಾಲನೆ–



ಪೋಷಣೆ, ಪೂಜೆ–ಪುನಸ್ಕಾರ, ವ್ರತ–ಆಚರಣೆ ಇದರಲ್ಲಿ ಆಕೆಯ ಇಡಿ ಜೀವನ ಕಳೆಯುವಂತ ಸಂಪ್ರದಾಯ. ಅದರಲ್ಲೂ ಮನೆಯ ಮುಖ್ಯ ಪಡಸಾಲೆಗೆ ಬಂದು ಕೂಡುವಂತಿರಲಿಲ್ಲ. ಗಂಡು ಮಕ್ಕಳು ಇರುವಲ್ಲಿ ನಿಲ್ಲುವ ಮತ್ತು ಬರುವಂತಿರಲಿಲ್ಲ. ಅವರು ಬಂದರೆ ತಲೆ ತುಂಬಾ ಸೆರಗೂ, ತಲೆ ತಗ್ಗಿಸಿ, ಮುಖ ಕಾಣದಂತೆ ಇರುವುದು. ಅಲ್ಲದೆ ಹೆಣ್ಣು ಮಗಳು ದೊಡ್ಡವಳಾದ ವೇಳೆಗೆ ಅವಳಿಗೆ ಪ್ರತ್ಯೇಕವಾಗಿ ಮನೆಯ ಹೊರಗಡೆ ತೆಂಗಿನ ಮರದ ಗರಿಯಿಂದ ಕಟ್ಟಿದ ಗುಡಿಸಲಲ್ಲಿ ವಾಸಿಸುವುದು ನಂತರ ಪ್ರತಿ ತಿಂಗಳು ಮುಟ್ಟಾದಾಗ ಸ್ನಾನ ಮಾಡದೆ ಮನೆಯ ಒಂದು ಹೊರ ಕೋಣೆಯಲ್ಲಿ ಆ ದಿನಗಳನ್ನು ಕಳೆಯುವುದು ಅಲ್ಲದೇ ಹೆಣ್ಣು ಮಕ್ಕಳ ಒಪ್ಪಿಗೆಯನ್ನು ಕೇಳದಯೇ ಬಾಲ್ಯ ವಿವಾಹ ಮಾಡುವುದು ಸಾಮಾನ್ಯವಾಗಿತ್ತು.

ಊರಿನ ಕೆಲವು ಧಾರ್ಮಿಕ ಗೊಡ್ಡು ಆಚರಣೆಗಳ ಮೂಲಕ ಅಂದರೆ ದೇವದಾಸಿ ಪದ್ಧತಿಗಳ ಮೂಲಕ ಹೆಣ್ಣು ಮಕ್ಕಳ ಮೇಲೆ ಶೋಷಣೆ ನಡೆಯುತಿತ್ತು. ಹೆಣ್ಣು ಮಗಳ ಗಂಡ ಅಕಾಲಿಕ ಮರಣದಿಂದ ಅವಳು ವಿಧವೆಯಾದರೆ, ಅವಳು ಯಾವ ಶುಭ ಕಾರ್ಯದಲ್ಲಿ ಭಾಗವಹಿಸುವಂತಿರಲಿಲ್ಲ. ತನ್ನ ಆಸೆ–ಆಕಾಂಕ್ಷೆಯನ್ನು ತ್ಯಜಿಸಿ ಕೇಶ ಮುಂಡನೆ ಮಾಡಿಸಿಕೊಂಡು ನಾರುಮಡಿಯನ್ನು ಉಟ್ಟುಕೊಂಡು ಜೀವಿಸುವ ಹಾಗೂ ಮಿತಿ ಆಹಾರವನ್ನು ಸೇವಿಸುವ ಜೀವನಮಾನವಿಡೀ ನಾಮಸ್ಮರಣೆಯಲ್ಲಿಯೇ ಕಾಲ ಕಳೆಯುವಂತೆ ಹೀಗೆ ಹಲವಾರು ಧಾರ್ಮಿಕ ಆಚರಣೆಯೊಂದಿಗೆ ನಾರಿಯು ಸಂಘರ್ಷಾತ್ಮಕವಾಗಿ ಬಂದಿದ್ದಾಳೆ. ಅವಳು [illegible] ಮುಸ್ಲಿಂ ಸಮಾಜದ ಹೆಣ್ಣು ಮಕ್ಕಳು ಹೊರಗಡೆ ಎಲ್ಲಿಯೇ ಹೋಗಲಿ ೧೦ ವರ್ಷ ವಯಸ್ಸಿನ ಎಲ್ಲ ಹೆಣ್ಣು ಮಕ್ಕಳು ಕಡ್ಡಾಯವಾಗಿ ಬುರ್ಖಾ ಧರಿಸುವ ಪದ್ಧತಿ ಇತ್ತು. ಹೆಣ್ಣು ಮಕ್ಕಳು ಪರಪುರುಷನೊಂದಿಗೆ ಮಾತನಾಡಬಾರದು. ಅವರಿಗೆ ಮುಖ ತೋರಿಸಬಾರದು ಎಂಬ ಸಂಪ್ರದಾಯ ಆದರೆ ಪುರುಷ ಎಲ್ಲ ರೀತಿಯ ಸ್ವಾತಂತ್ರ್ಯ ಹೊಂದಿದ್ದು ಒಂದು ವೇಳೆ ಅವನಿಚ್ಛೆಯಂತೆ ಎರಡರಿಂದ ಮೂರು ಮದುವೆಯಾಗುವ ಅವಕಾಶ ಮುಸ್ಲಿಂ ಧರ್ಮದಲ್ಲಿ ಪದ್ಧತಿ ಇದೆ. ಹೀಗೆ ಸಾರಾ ಅಬೂಬ್ಬಕರ್ ಅವರು ಧಾರ್ಮಿಕತೆಯ ಧರ್ಮಾಂಧತೆ, ಧಾರ್ಮಿಕ ಮೂಢನಂಬಿಕೆಗಳ ಮುಸ್ಲಿಂ ಹೆಣ್ಣು ಮಕ್ಕಳು ಧಾರ್ಮಿಕವಾಗಿ ಯಾವ ರೀತಿಯಲ್ಲಿ ತನ್ನ ಜೀವನವನ್ನು ಎದುರಿಸಿದ್ದರು ಎಂಬುದನ್ನು ತಮ್ಮ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಎಂಬ ಆತ್ಮ ಕಥನದಲ್ಲಿ ವ್ಯಕ್ತಪಡಿಸಿದ್ದಾರೆ.

ಶಶಿಕಲಾ ವೀರಯ್ಯಸ್ವಾಮಿಯವರಿಗೆ ಗಂಡ ಬಿಟ್ಟವಳು ಎಂಬ ಕಾರಣಕ್ಕಾಗಿ ಧಾರ್ಮಿಕ ಸಂದರ್ಭಗಳಲ್ಲಿ ದಂಡೆ ಆರತಿಗಳನ್ನು ಮುಟ್ಟಗೊಡುತ್ತಿರಲಿಲ್ಲ. ಗಂಡನ ಹೆಸರು ಒದವು ಹಾಕಿ ಹೇಳುವಂತಿರಲಿಲ್ಲ. ಹೀಗೆ ಎಲ್ಲವನ್ನು ಮೌನವಾಗಿ ಸಹಿಸಿಕೊಂಡು ಧಾರ್ಮಿಕ ಸಂಪ್ರದಾಯದ ಚೌಕಟ್ಟಿನಲ್ಲಿ ಒಬ್ಬ ವಿಧವೆಯ ಬದುಕನ್ನು ಸಾಗಿಸುತ್ತಾ ಬಂದಿರುವುದೂ ಕಾಣಬಹುದು.



Scanned with CamScanner

## ಕೌಟುಂಬಿಕವಾಗಿ :

'ಹೆಣ್ಣು ಕುಟುಂಬದ ಕಣ್ಣು' ಎನ್ನುವರು ಆದರೆ ಈ ಒಕ್ಕ ಪ್ರಧಾನ ಕುಟುಂಬ ವ್ಯವಸ್ಥೆಯಿಂದಾಗಿ, ಹೆಣ್ಣು ಕುಟುಂಬದ ಆಗು-ಹೋಗುಗಳ ಎಲ್ಲದರ ಬಗ್ಗೆ ಕಾಳಜಿವಹಿಸಿ ತನ್ನ ಬದುಕನ್ನು ಸಾಗಿಸಬೇಕು. ಹೆಣ್ಣು ಮಕ್ಕಳು ಹಗಲು-ಇರುಳು ವಿಶ್ರಾಂತಿಯಿಲ್ಲದೆ, ಕೌಟುಂಬಿಕ ಸುಖಕ್ಕಾಗಿ ತಮ್ಮನ್ನು ತಾವೇ ದಣಿಸಿಕೊಳ್ಳುತ್ತ ಬಂದಿದ್ದಾರೆ. ಮಕ್ಕಳನ್ನು ಹೆರುವುದಕ್ಕಾಗಿ, ಮಕ್ಕಳ ಪಾಲನೆ-ಪೋಷಣೆ ಮಾಡುವುದಕ್ಕಾಗಿ ಗಂಡನನ್ನು ಪ್ರಶ್ನಾತೀತ ದೈವವೆಂದು ತಿಳಿದುಕೊಂಡು ದೈಹಿಕವಾಗಿ, ಮಾನಸಿಕವಾಗಿ ಬಂದು ಹೋಗುವ ಪ್ರಸಂಗಗಳಲ್ಲಿಯೂ ಎಲ್ಲವನ್ನು ಸಹಿಸಿಕೊಂಡು ಬದುಕನ್ನು ನಡೆಸುವ ಛಲಗಾತಿ ಹೆಣ್ಣಾಗಿದ್ದಾಳೆ. ಹಿರಿಯರು-ಕಿರಿಯರು, ಬಂಧು-ಬಳಗ ಯಾರೇ ಬರಲಿ ಮನೆಗೆ ಅವರಿಗೆ ಸರಿಯಾದ ರೀತಿಯಲ್ಲಿ ಊಟ, ಉಪಚಾರ ವ್ಯವಸ್ಥೆ ಮಾಡುವುದು ಹೆಣ್ಣು ಮಕ್ಕಳೆ.

ಶಶಿಕಲಾ ವೀರಯ್ಯಸ್ವಾಮಿ ಮಠದವರ 'ಬದ್ನೆಕಾಯಿ ಇದ್ದಂತೆ' ಎಂಬ ಕಾದಂಬರಿ ರೂಪದ ಆತ್ಮ ಕಥನದಲ್ಲಿ ವಿಸ್ತೃತವಾಗಿ ಹೇಳಿಕೊಂಡದ್ದು ತನ್ನ ಸಂಬಂಧಗಳನ್ನು ನಿಖರವಾಗಿ ಹೇಳಿಕೊಳ್ಳುವ ಲೇಖಕಿ ತಮ್ಮವರಂತೆ ಕಂಡು ಬರುತ್ತದೆ. ಅವರ ದಾಂಪತ್ಯದ ವೃತ್ತಾಂತಗಳನ್ನು ನೋಡುವ ಈ ಸಾಧಕಿ [illegible] ಸ್ತ್ರೀ ಸಾರ್ಥಕತೆಯನ್ನು ಎತ್ತಿಹಿಡಿಯುವುದನ್ನು ನೋಡಬಹುದು.

ಸಾಂಪ್ರದಾಯಿಕ ಸಂಬಂಧಗಳ ಶೋಷಣೆಗೆ ಒಳಗಾದ ಮಹಿಳಾ ಲೇಖಕಿಯರ ಬದುಕಿನ ಬವಣೆಗಳನ್ನು ಆತ್ಮ ಕಥೆಗಳ ಮೂಲಕ ಪರಿಶೀಲಿಸಿದಾಗ ನನಗೆ ತಿಳಿದು ಬಂದ ವಿಷಯವೇನೆಂದರೆ ನಾರಿಯ ಆತ್ಮಕಥನಗಳು ತಮ್ಮ ಜೀವನದಲ್ಲಿ ಕೇವಲ ಪ್ರಚಾರ ಬಯಸಿದ ವ್ಯಕ್ತಿ ವೈಭವೀಕರಣ ಮಾತ್ರವಲ್ಲ ಬದುಕಿನ ವಾಸ್ತವ ವಿಷಯಗಳನ್ನು ಗ್ರಹಿಸುವ ಸಾಮರ್ಥ್ಯವನ್ನು ವ್ಯಕ್ತ ಪಡಿಸುತ್ತವೆ. 'ನಾನು ಭಾರ್ಗವಿ' ಎಂಬ ಕೃತಿಯಲ್ಲಿ ಭಾರ್ಗವಿಯವರ ಸರಳ ಬದುಕು ಜೀವನದಲ್ಲಿ ಬರುವ ಏರುಪೇರುಗಳಲ್ಲಿ ಯಥಾವತ್ತಾಗಿ ಸ್ವೀಕರಿಸುವ ರೀತಿ ಅನನ್ಯವಾಗಿ ತೋರುತ್ತದೆ. ಯಾರನ್ನು ದೂರದೇ, ಯಾರನ್ನು ವೈಭವೀಕರಿಸದೇ ತನ್ನ ಅಸ್ಮಿತೆಯನ್ನು ಜೀವನ ಪ್ರೀತಿಯನ್ನು ಉಳಿಸಿಕೊಳ್ಳುವ ಪರಿ, ಅತ್ಯಂತ ಮನೋಜ್ಞವಾಗಿದೆ. ಇಲ್ಲಿ ಒಂದು ಕುಟುಂಬದ ಚಿತ್ರಣವು ಬದುಕಿನ ಹೋರಾಟದ ಅನೇಕ ಘಟನೆಗಳ ದಾಖಲೆಯೂ ಆಗಿದೆ. ಒಬ್ಬ ಸ್ವತಂತ್ರ ಹೋರಾಟಗಾರರ ಜೀವನ ಕಥೆ, ಆ ಕಾಲ ಘಟ್ಟದ ಇತಿಹಾಸ, ಸಾಮಾಜಿಕ ಸ್ಥಿತಿಗತಿ, ವಸ್ತು ನಿಷ್ಠತೆಯನ್ನು ಪ್ರತಿಪಾದಿಸುವಂತೆ ಆತ್ಮ ಕಥೆಯ ಮೂಲಕ ತನ್ನ ಹುಟ್ಟು ಪರಿಸರ, ಸಮಾಜ, ಸಂಬಂಧ ನೋವು-ನಲಿವು, ಬದುಕು ಬವಣೆಗಳನ್ನು ನೋಡುತ್ತಾ ಸಾಧಕಿಯಾಗಿ ಹೊರ ಹೊಮ್ಮಿದ ಕಾಲ ಘಟ್ಟದ ದಾಖಲೆಯಾಗಿ ಸ್ತ್ರೀತನದ ಘನತೆ ಗಾಂಭೀರ್ಯತೆಗೆ ಸಾಕ್ಷಿಯಾಗಿದೆ.



## ಸಾಮಾಜಿಕವಾಗಿ:

ಒಂದು ಕಾಲಕ್ಕೆ ಇಡೀ ಸಮಾಜವು ಪುರುಷ ಕೇಂದ್ರಿತವಾಗಿ ಪರಿಣಮಿಸಿರುವ ಸಂದರ್ಭದಲ್ಲಿ ಅನೇಕ ತರದ ಶೋಷಣೆಗೆ ಒಳಗಾದ ಹೆಣ್ಣು, ಅವನು ಆಡಿಸುವ ಕೀಲು ಗೊಂಬೆಯಾಗಿ ತನ್ನ ಆಸೆ, ಆಕಾಂಕ್ಷೆಗಳನ್ನು ಮೀರಿ ಅವನ ಸಂತೋಷಕ್ಕಾಗಿ ಬದುಕುತ್ತಾ ಬಂದಿದ್ದಾಳೆ. ನಾರಿಯ ಜೀವನವನ್ನು 'ಕುಟುಂಬ', 'ಸಮಾಜ' ಎಂಬ ದ್ವಿಮಾನ ರೀತಿಯಲ್ಲಿ ಪರಿಭಾವಿಸಲಾಗದು. ಇವು ಒಂದರೊಳಗೊಂದು ಅಂತರ್ಗತವಾದ ಸಂಗತಿಗಳು. ಅನಾದಿಕಾಲದಿಂದಲೂ ನಾರಿಯ ಬದುಕಿನಲ್ಲಿ ಬೆಲೆಕಟ್ಟುವ ಎರಡು ಕೇಂದ್ರಗಳು. ಏಕೆಂದರೆ ಹೆಣ್ಣು ಕುಟುಂಬದ ಅಂಗವಾದರೆ, ಕುಟುಂಬ ಎಂಬುವುದು ಸಮಾಜದ ಒಂದು ಅಂಗ, ಆದರೆ ಈ ಎರಡರಲ್ಲಿಯೂ ಬದುಕುವ ಶೈಲಿ ನಾರಿಯದು. ಜನಪದರು ಹೇಳುವಂತೆ 'ಅತ್ತೆ ಮಾವರಿಗಂಜಿ ಸುತ್ತೇಳು ನೆರೆಗಂಜಿ' ಕುಟುಂಬದಲ್ಲಿನ ಹಿರಿಯರಿಗೆ ಹೆದರಿ ಬದುಕು ಮಾಡಬೇಕಾದವಳಿಗೆ ಸಮಾಜದ ಮೌಲ್ಯಗಳು ಕುಟುಂಬದೊಳಗಿನ ತರತಮಗಳು ಸಮಾಜದೊಳಗಿನ ಬಿಂಬ ಪ್ರತಿಬಿಂಬದಂತಿರುತ್ತದೆ. ಹೆಣ್ಣುಮಗಳು ಸಮಾಜದಲ್ಲಿ 'ಹಾದಾಡುವ ಹೊಸ್ತಿಲಲ್ಲಿ ಹೊಯ್ದಾಡುವ ದೀಪದಂತಿರಬೇಕಾಗುತ್ತದೆ. ಆದರೆ, ಆಕೆಯ ಬದುಕಿನ ಸಾಧ್ಯತೆಗಳ ಅನುಗುಣವಾಗಿ ಸಾಮಾಜಿಕ ಬದುಕಿನ ಸಂದರ್ಭಗಳಲ್ಲಿ ಸೇಸಾಡಿದ ಅನುಭವಗಳೊಂದಿಗೆ ಬದುಕಬೇಕಾದ ಅನಿವಾರ್ಯದ ಸ್ಥಿತಿ ಒಂದುಕಡೆಯಾದರೆ, ಹೆಣ್ಣು ಪರಾವಲಂಬಿಯಾಗಿ ದಿಟ್ಟತನದಿಂದ ಬದುಕನ್ನು ನಡೆಸಿದರೆ ಸಮಾಜದ ದೃಷ್ಟಿಯಲ್ಲಿ ಅವಹೇಳನ ಕಾರಿಯಾಗಿ ಬಲಿಯಾಗಬೇಕಾದ ಪರಿಸ್ಥಿತಿ ಅವಳದಾಗಿತ್ತು.

'ಬೆಂಕಿ ಬೆಡಗು' ಆತ್ಮ ಕಥನದಲ್ಲಿ ಉಮಾಶ್ರೀ ಸಾಮಾಜಿಕವಾಗಿ ಮುಖ್ಯವಾದ ಕಲಾವಿದೆ. ತಮ್ಮ ಅಂತರಂಗದ ಪುಟಗಳನ್ನು ತೆರೆಯುತ್ತಾರೆ. ಬದುಕುವ ಸೃಜನಶೀಲತೆಯು ಹೆಣ್ಣಿಗೆ ಅಮ್ಮಗಿಂತಲು, ಪಾಂಡಿತ್ಯಕ್ಕಿಂತಲು ಅನಿವಾರ್ಯತೆಯಲ್ಲಿ ಅನ್ನ ಸಂಪಾದನೆ, ಹಸಿವು ಮತ್ತು ಅಸ್ತಿತ್ವದ ಹುಡುಕಾಟಗಳು ಸೃಷ್ಟಿಸುವ ಒತ್ತಡದಲ್ಲಿ ವಿಲಕ್ಷಣ ಬದುಕನ್ನು ಬದುಕಲು ತಕ್ಕ ಉದಾಹರಣೆ.

ಬಾಲ್ಯ ವಿವಾಹ, ಹೆಣ್ತನದ ಅವಹೇಳನ, ಅಪಾತ್ರನಿಗೆ ಮೀಸಲು ಮಾರಿದ್ದು, ಅನರ್ಹನನ್ನು ಮದುವೆಯಾಗಿ ತಿರಸ್ಕೃತಳಾದರು ಪುನಃ ಅವನು ಕ್ಷಮಿಸೆಂದು ಬಂದಾಗ ಅವನನ್ನು ಸ್ವೀಕರಿಸಿ, ಅವನ ಕ್ಷುಲ್ಲಕತನಗಳಿಗೆ ಹೇಸಿ ತಾನೇ ಮನೆಯಿಂದಾಚೆ ನೂಕಿ ಕೈ ತೊಳೆದುಕೊಂಡದ್ದು, ನಂತರ ದ್ರೋಹಗಳು, ಅಕಾಲಿಕ ಸಾವು, ಅನಾಥತೆ, ಒಂಟಿತನ ಎಲ್ಲ ಒಂದಕ್ಕಿಂತ ಒಂದು ಬವಣೆಯನ್ನು ಹುಟ್ಟಿಸಿಕೊಂಡಿದ್ದವು. ಇವೆಲ್ಲವುಗಳ ಮಧ್ಯ ಸಮಾಜ ನೋಡುವ ದೃಷ್ಟಿಕೋನ ಎಲ್ಲವನ್ನು ಮೌನವಾಗಿ ಅನುಭವಿಸುತ್ತ ನೋವನ್ನು ಶಶಿಕಲಾ ವೀರಯ್ಯಸ್ವಾಮಿಯವರು ತಮ್ಮ ಆತ್ಮ ಕಥನದಲ್ಲಿ ವ್ಯಕ್ತಪಡಿಸಿದ್ದಾರೆ.



Scanned with CamScanner

**ಶೈಕ್ಷಣಿಕವಾಗಿ :**

ಹಿಂದೆ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡುವುದು ಅಪರೂಪವಾಗಿತ್ತು. ಏಕೆಂದರೆ ಹೆಣ್ಣು ಮಕ್ಕಳು ದೊಡ್ಡವಳಾದ ಮೇಲೆ ಬೇರೆ ಮನೆಗೆ ಮದುವೆಯಾಗಿ ಹೋಗುತ್ತಾಳೆ. ಅವಳು ಓದುವ ಶಾಲೆಯ ಅವಶ್ಯಕತೆ ಇರುತ್ತಿರಲಿಲ್ಲ ಎಂದು. ಕೇವಲ ಅಂದಿನ ದಿನಗಳಲ್ಲಿ ಹೆಣ್ಣು ಮಕ್ಕಳಿಗೆ ಪುರಾಣ, ರಾಮಾಯಣ, ಮಹಾಭಾರತ, ಲಕ್ಷ್ಮೀಶನ ಜೈಮಿನಿ ಭಾರತ, ಕುಮಾರವ್ಯಾಸನ ಗದುಗಿನ ಭಾರತ, ಭಗವದ್ಗೀತೆ, ಕುರಾನ್ ಇವುಗಳನ್ನು ಮಾತ್ರ ಓದಲು ಹೇಳಿಕೊಡುತ್ತಿದ್ದರು. ಇದರ ಹೊರತು ಬೇರೆ ಹೆಚ್ಚಿನ ವಿದ್ಯಾಭ್ಯಾಸ, ಶಾಲೆ ಕಾಲೇಜುಗಳಿಗೆ ಕಳುಹಿಸುವ ವ್ಯವಸ್ಥೆಯು ಹಳ್ಳಿಗಳಲ್ಲಿ ಅಷ್ಟಾಗಿ ಕಂಡು ಬರುತ್ತಿರಲಿಲ್ಲ.

ಶಶಿಕಲಾ ವೀರಯ್ಯಸ್ವಾಮಿಯವರ ಆತ್ಮ ಕಥನದಲ್ಲಿ ಅವರು ಎಸ್.ಎಸ್.ಎಲ್.ಸಿ. ವರೆಗೆ ಓದು ಮುಗಿಸಿದ ನಂತರ ಅವರ ಅನುಮತಿಯಿಲ್ಲದೆ ೧೩ ವರ್ಷ ಅಂತರ ಇರುವ ಅವರ ಸೋದರ ಮಾವನೊಂದಿಗೆ ಮದುವೆಯಾಗಿ ನಂತರ ಕಾರಣಾಂತರಗಳಿಂದ ಆ ಸಂಬಂಧ ಮುರಿದು ಬಿದ್ದುದರಿಂದ ಇವರ ವಿದ್ಯಾಭ್ಯಾಸ ಮುಂದುವರೆಯಿತು. ಇವರು ಕಾಲೇಜಿಗೆ ಸೇರಿಕೊಂಡಾಗ ಅಲ್ಲಿ ಎಲ್ಲರೂ ಸಹ ಅವರಿಗೆ ಗಂಡ ಬಿಟ್ಟವಳು ಎಂದು ಅವಹೇಳನಕ್ಕೆ ಗುರಿಮಾಡಿದರು ಮೌನವಾಗಿ ವೇದನೆ ಅನುಭವಿಸುವಂತಾಗಿದ್ದುದನ್ನು ಕಾಣಬಹುದು.

ಅಂದಿನ ಕಾಲದಲ್ಲಿ ಮುಸ್ಲಿಂ ಸಮಾಜದ ಹೆಣ್ಣು ಮಕ್ಕಳಿಗೆ ಶಿಕ್ಷಣವೆಂದರೆ ಕೇವಲ 'ಕುರಾನ್' ಪಠಣಕ್ಕೆ ಮಾತ್ರ ಸೀಮಿತವಾಗಿದ್ದ ಸಂದರ್ಭದಲ್ಲಿಯೂ ಸಾರಾ ಅಬೂಬಕರ್ ಅವರು ಎಸ್.ಎಸ್.ಎಲ್.ಸಿಯವರೆಗೆ ವಿದ್ಯಾಭ್ಯಾಸಮಾಡಿ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ತಾವು ತೊಡಗಿಕೊಂಡು ಇಂದಿಗೂ ಮುಸ್ಲಿಂ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದರೆ ತಪ್ಪಾಗಲಾರದು.

ಜಾತಿಯ ತಾರತಮ್ಯದಿಂದಾಗಿ ಎಲ್ಲರೊಂದಿಗೆ ಬೆರೆಯುವ ಅವಕಾಶವಿರುತ್ತಿರಲಿಲ್ಲ. ಈ ದಿಶೆಯಲ್ಲಿ ಮೇಲ್ಜಾತಿಯ ಮಕ್ಕಳು ಒಂದು ಕಡೆ ಕೂತರೆ ಗೀತಾ ನಾಗಭೂಷಣ ಅವರು ತಮ್ಮ ಬಾಲ್ಯದಲ್ಲಿ ಒಂದು ಕಡೆ ಮೂಲೆಯಲ್ಲಿ ಕುಳಿತು ಪಾಠ ಕೇಳಬೇಕಾದ ಅನಿವಾರ್ಯತೆಯೊಂದಿಗೆ ವಿದ್ಯಾಭ್ಯಾಸದಲ್ಲಿ ಪ್ರತಿಭಾವಂತರಾಗಿದರು. ಎಸ್.ಎಸ್.ಎಲ್.ಸಿಯ ನಂತರ ಎಲ್ಲರ ವಿರೋಧವಿದ್ದರು ಸರ್ಕಾರಿ ಕಛೇರಿಯಲ್ಲಿ ಸಹಾಯಕ ಹುದ್ದೆಗೆ ಸೇರಿಕೊಂಡು, ಜೊತೆಗೆ ಇವರು ದೂರದ ಬೆಟ್ಟದ ಮೇಲೆ ಇರುವ ಕಾಲೇಜಿಗೆ ದಿನ ನಿತ್ಯ ಬೆಳಗಿನ ಕ್ಲಾಸುಗಳನ್ನು ಹಾಜರಾಗಿ ಕಛೇರಿಯ ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹಾಜರಾಗುತ್ತಿದ್ದರು

ಹೀಗೆ ಪ್ರತಿ ಹಂತದಲ್ಲಿ ಶೈಕ್ಷಣಿಕವಾಗಿ ಮುಂದುವರೆಯುವಲ್ಲಿ ವಿವಿಧ ರೀತಿಯಲ್ಲಿ ಹಲವಾರು ಲೇಖಕಿಯರು ತಮ್ಮ ಜೀವನದ ಸಂಘರ್ಷಗಳನ್ನು ನಡೆಸುತ್ತಲೇ ಬಂದಿದ್ದಾರೆ.



ಹೀಗೆ ಕನ್ನಡ ಮಹಿಳಾ ಸಾಹಿತ್ಯವನ್ನು ಕಟ್ಟಿಕೊಡುವಲ್ಲಿ 'ಎಲೆ ಮರೆಯ ಹೂವಿನ ಕಂಪಿನಂತೆ' ತಮ್ಮ ಪಾಡಿಗೆ ತಾವು ಸಾಹಿತ್ಯ ಕೃಷಿಮಾಡುತ್ತ ಬಂದಿರುವ ಮಹಿಳೆಯರ ಆತ್ಮ ಕಥನಗಳು ಖಂಡಿತವಾಗಿಯು ಸ್ತ್ರೀ ಜಾಗೃತಿಯ ನಿಟ್ಟಿನಲ್ಲಿ ಅಷ್ಟೇ ಅಲ್ಲ ಸ್ತ್ರೀ ಕುಲದ ಅಸ್ಮಿತೆಯನ್ನು ಎತ್ತಿ ಹಿಡಿದು, ಪುರುಷ ಕೇಂದ್ರಿತ ಸಮಾಜದಲ್ಲಿನ ಹಲವು ದೌರ್ಜನ್ಯ, ಅಸಮಾನತೆಯನ್ನು ತೊಡೆದು ಹಾಕಿ ಸಮಾನತೆಯೆಂಬ ತಳಹದಿಯ ಮೇಲಿನ ಸಮಾನ ದೃಷ್ಟಿಯ ಸಮಾಜವನ್ನು ನಿರ್ಮಿಸಲು ಸಾಧ್ಯವಾಗುತ್ತದೆ ಎಂಬ ವಿಶ್ವಾಸದಿಂದ ಮಹಿಳೆಯರ 'ಆತ್ಮ ಕಥನಗಳು' ಇನ್ನಷ್ಟು ಹುಲುಸಾಗಿ ಹೊರಬರಬೇಕಿದೆ ಎಂಬುದೇ ಈ ಲೇಖನದ ಮುಖ್ಯ ಆಶಯವಾಗಿದೆ.

**ಆಕರ ಗ್ರಂಥಗಳು :**

೧. ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು : ಸಾರಾ ಅಬೂಬಕರ್
೨. ಇದ್ದೇನಯ್ಯ ಇಲ್ಲದಂತೆ : ಶಶಿಕಲಾ ವೀರಯ್ಯಸ್ವಾಮಿ
೩. ಲೇಖ-ಲೋಕ : ಸಂ: ಡಾ.ವಿಜಯಾ ದಬ್ಬೆ
೪. ಆಧುನಿಕೋತ್ತರ ಕನ್ನಡ ಮಹಿಳಾ ಸಾಹಿತ್ಯ ಹೊಸ ನೆಲೆಗಳ ಶೋಧ : ಸಂ: ಶಿವಾನಂದ ಕಳಕಪ್ಪನವರ
೫. ಲೇಖ-ಲೋಕ -೪ : ಸಂ: ಕೆ. ಉಮಾ ಪಿ. ರೈ, ಕೆ. ಎಂ.ವಿಜಯಲಕ್ಷ್ಮೀ
೬. ನಾನು ಭಾರ್ಗವಿ : ಭಾರ್ಗವಿ ನಾರಾಯಣ
೭. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ : ಸಂ: ಎಚ್.ಎಸ್. ಶ್ರೀಮತಿ.



Scanned with CamScanner